ಸಿ.ಸಿ. 548/2022

ಪಿ. ಡಬ್ಲ್ಯೂ : 01

**ಸಾಕ್ಷಿಗೆ ದಿನಾಂಕ 12.07.2024 ರಂದು ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಟಿ.ಎನ್.ಎಸ್.ಕೆ ವಕೀಲರಿಂದ**

ಆರೋಪಿಯ ಗಂಡನ ಹೆಸರು ಸುರೇಶ. ನಾನು ನಡೆಸುತ್ತಿರುವ ಹೊಟೇಲ್ ನ ಹೆಸರು ಅಭಿರುಚಿ ನಗುವನಹಳ್ಳಿ ಆಗಿರುತ್ತದೆ. ವಾರ್ಷಿಕವಾಗಿ ಜಮೀನಿನಿಂದ 3 ಲಕ್ಷ ಆದಾಯವಿರುತ್ತದೆ ಹಾಗೂ ನನ್ನ ಹೊಟೇಲ್ ವ್ಯವಹಾರದಿಂದ ರೂ.50,000/- ಪ್ರತಿ ತಿಂಗಳು ಆದಾಯವಿರುತ್ತದೆ. ಪ್ರತಿ ತಿಂಗಳು ಖರ್ಚು ವೆಚ್ಚ ಕಳೆದು ರೂ.30,000/- ರಿಂದ 35,000/- ಉಳಿತಾಯವಾಗುತ್ತದೆ. ಚೆಕ್ ನಲ್ಲಿ ಬರೆದಿರುವ ಬರವಣಿಗೆ ಆರೋಪಿಯದ್ದಾಗಿರುತ್ತದೆ. 2022 ಫೆಬ್ರವರಿಯಿಂದ ಆರೋಪಿಯ ಗಂಡ ನನ್ನ ಹೊಟೇಲ್ ಗೆ ಬರುತ್ತಿದ್ದರು. ಆರೋಪಿಯ ಗಂಡ 2022 ನೇ ಸಾಲಿನಲ್ಲಿ ಶ್ರೀರಂಗಪಟ್ಟಣ ಬಿ.ಓ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಆರೋಪಿಯ ಗಂಡ 24.01.2019 ರಿಂದ 02.10.2023 ರವರೆಗೆ ಹೊಸಕೆರೆ ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ಸರ್ಕಾರಿ ಪ್ರೌಢ ಶಾಲಾ ವಿಭಾಗದಲ್ಲಿ ಪ್ರಥಮ ದರ್ಜೆ ಸಹಾಯಕನಾಗಿ ಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ತಿಳಿದಿರುವುದಿಲ್ಲ. ದಿ. 14.12.2021 ರಂದು ನಮ್ಮ ಗ್ರಾಮದ ಸುನಿತಾ ಶಿವಸ್ವಾಮಿ ರವರಿಗೆ ಆರೋಪಿಯು ರೂ.10,000/- ಹಣವನ್ನು ಪಡೆದುಕೊಂಡಿದ್ದು ಸದರಿ ಭದ್ರತೆಗಾಗಿ ಈ ಪ್ರಕರಣದ ಚೆಕ್ಕನ್ನು ನೀಡಿದ್ದು ಸದರಿ ಮೇಲ್ಕಂಡ 14.12.2021 ರಂದು ಸುನಿತಾ ರವರ ಖಾತೆಗೆ ರೂ.10,000/- ಹಣವನ್ನು ಜಮಾವಣೆ ಮಾಡಿದ್ದು ಸದರಿ ಚೆಕ್ಕನ್ನು ಸುನಿತಾ ರವರು ಹಿಂದಿರುಗಿಸದೆ ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ